# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತಾರಾಮ ಬುಡ್ನ ಸಿದ್ದಿ ರವರ ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ

**ಸೂಚನೆ:-**

ಧಾರವಾಡ, ಬೆಳಗಾವಿ, ಉತ್ತರ ಕನ್ನಡ, ಶಿವಮೊಗ್ಗ, ಮತ್ತು ಭದ್ರಾವತಿ ಜಿಲ್ಲೆಗಳಲ್ಲಿ ಕಾಡಿನಲ್ಲಿ ಮತ್ತು ಕಾಡಂಚಿನಲ್ಲಿ ಅನೇಕ ವರ್ಷಗಳಿಂದ ಹೈನುಗಾರಿಕೆಯೆ ಮೂಲ ಕಸುಬನ್ನಾಗಿ ದನಕರು ಮತ್ತು ಎಮ್ಮೆಗಳನ್ನು ಸಾಕಿಕೊಂಡು ಧನಗರ ಗೌಳಿ ಜನಾಂಗವು ವಾಸಿಸುತ್ತಿದೆ. ಮಳೆಗಾಲದಲ್ಲಿ ಕಾಡಿನ ಮೇವು ಆಧರಿಸಿ, ಬೇಸಿಗೆಗಾಲದಲ್ಲಿ ಒಣ ಹುಲ್ಲನ್ನು ಖರೀದಿ ಮಾಡಿ ದನಕರುಗಳನ್ನು ಸಾಕುತ್ತಾರೆ.

ಪ್ರತಿ ಕುಟುಂಬದಲ್ಲೂ ಕೂಡ ಕನಿಷ್ಠ 150 ರಿಂದ 200 ದನಕರು ಮತ್ತು ಎಮ್ಮೆಗಳನ್ನು ಸಾಕುತ್ತಿದ್ದ ಈ ಜನಾಂಗ ಜಾನುವಾರುಗಳಿಗೆ ಬೇಸಿಗೆಯಲ್ಲಿ ಮೇವು ಖರೀದಿಸಿ ಹಾಕುವುದಕ್ಕೆ ಸಾಧ್ಯವಾಗದ ಕಾರಣ ಕ್ರಮೇಣ ಇವರು ಜಾನುವರುಗಳನ್ನು ಸಾಕುವುದು ಕಡಿಮೆಯಾಗುತ್ತಿದೆ ಮತ್ತು ಕೆಲವರು ಜೀವನ ನಿರ್ವಹಣೆಗಾಗಿ ಗಾರೆ ಕೆಲಸ ಮುಂತಾದ ಕೆಲಸಗಳಿಗಾಗಿ ಇತರೆ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ.

ಹೀಗಾಗಿ ಸರ್ಕಾರವು ಈ ಜನಾಂಗದ ಹೈನುಗಾರಿಕೆ ವೃತ್ತಿಯನ್ನು ಪ್ರೋತ್ಸಾಹಿಸಿ ಬೇಸಿಗೆ ಸಮಯದಲ್ಲಿ ಮೇವು ಸಿಗುವಂತೆ ಯೋಜನೆ ರೂಪಿಸಿ ಜೀವನ ನಿರ್ವಹಿಸಲು ಅನುಕೂಲ ಮಾಡಿಕೊಡುವ ಕುರಿತು.

**ಹೇಳಿಕೆ:-**

ಪ್ರಸ್ತಾಪಿಸಿದ ಜಿಲ್ಲೆಗಳೂ ಸೇರಿದಂತೆ ಪ್ರಸ್ತುತ 2023-24ನೇ ಸಾಲಿನಲ್ಲಿ ರಾಜ್ಯದ 223 ತಾಲ್ಲೂಕುಗಳನ್ನು ಬರ ಪೀಡಿತ ಎಂದು ಘೋಷಣೆ ಮಾಡಲಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಜೋಯಿಡಾ, ಯಲ್ಲಾಪುರ, ಹಳಿಯಾಳ ಹಾಗೂ ಮುಂಡಗೋಡ ತಾಲ್ಲೂಕುಗಳಲ್ಲಿ ಅಂದಾಜು 8,375 ಧನಗರ ಗೌಳಿ ಕುಟುಂಬದವರು ಸುಮಾರು 25,600 ಜಾನುವಾರುಗಳೊಂದಿಗೆ ಹೈನುಗಾರಿಕೆಯನ್ನು ಮೂಲ ಕಸುಬುನ್ನಾಗಿ ಮಾಡಿಕೊಂಡಿದ್ದು, ಹಾಲು ಉತ್ಪನ್ನಗಳನ್ನು ಮಾರಾಟ ಮಾಡುವ ಮೂಲಕ ಜೀವನ ನಡೆಸುತ್ತಿದ್ದಾರೆ. ಮಾನ್ಯ ಸದಸ್ಯರು ತಿಳಿಸಿರುವಂತೆ ಕಾಡಿನ ಮೇವು ಆಧರಿಸಿ ಜಾನುವಾರುಗಳ ಪೋಷಣೆ ಮಾಡಲಾಗುತ್ತಿದೆ. ಬೇಸಿಗೆಯಲ್ಲಿ ಮೇವು ಖರೀದಿಸಿ ಸಾಕಾಣೆ ಮಾಡುತ್ತಿದ್ದಾರೆ. ಕೆಲವೊಂದು ಕುಟುಂಬದವರು ಜಮೀನನ್ನು ಹೊಂದಿದ್ದು ವ್ಯವಸಾಯ ಮಾಡುತ್ತಾ ಮೇವು ಬೆಳಸುತ್ತಿದ್ದಾರೆ.

ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲೂಕಿನ 26 ಗೌಳಿವಾಡಗಳಲ್ಲಿ ಧನಗರ ಗೌಳಿ ಜನಾಂಗವು ವಾಸಿಸುತ್ತಿದ್ದು 26 ಗೌಳಿವಾಡಗಳಲ್ಲಿ 3,294 ಎಮ್ಮೆ, 3,971 ದನ, 1,673 ಕುರಿ ಮತ್ತು 2,450 ಮೇಕೆಗಳಿದ್ದು, ಪಶುಸಂಗೋಪನೆಯು ಉಪ ಕಸುಬು ಆಗಿರುತ್ತದೆ.

ಪ್ರಸ್ತುತ ಸಾಲಿನ ಬರ ಘೋಷಣೆ ಹಿನ್ನೆಲೆಯಲ್ಲಿ ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿ (SDRF) / ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ನಿಧಿ (NDRF) ಉಪಯೋಗಿಸಿಕೊಂಡು ಮೇವು ಕೊರತೆ ಉಂಟಾಗುವ ಪ್ರದೇಶಗಳಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರಗಳು ಸ್ಥಳೀಯ ಪರಿಸ್ಥಿತಿಯನ್ನು ಅವಲೋಕಿಸಿ ತಾತ್ಕಾಲಿಕವಾಗಿ ಮೇವು ನಿಧಿಗಳನ್ನು ಸ್ಥಾಪಿಸಿ ಜಾನುವಾರು ಮಾಲೀಕರಿಗೆ ರಿಯಾಯಿತಿ ದರದಲ್ಲಿ ಮೇವು ಪೂರೈಸಲು ಕ್ರಮವಹಿಸುವಂತೆ ಸೂಚಿಸಲಾಗಿದೆ. ಒಂದು ವೇಳೆ ಮೇವು ಕೊರತೆ ತೀವ್ರವಾದಲ್ಲಿ ಜಾನುವಾರುಗಳಿಗೆ ಆಶ್ರಯ ಕಲ್ಪಿಸಿ ಉಚಿತವಾಗಿ ಮೇವು ನೀರು ಒದಗಿಸುವ ಸಂಬಂಧ ತಾತ್ಕಾಲಿಕ ಜಾನುವಾರು ಶಿಬಿರಗಳನ್ನು ಸಹ ಆರಂಭಿಸಲಾಗುವುದು. ಇವುಗಳ ಸೌಲಭ್ಯವನ್ನು ಧನಗರ ಗೌಳಿ ಜನಾಂಗವು ಸಹ ಪಡೆಯಬಹುದಾಗಿದೆ.

...2

ಬರ ಪೀಡಿತ ತಾಲ್ಲೂಕುಗಳಲ್ಲಿ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಮೇವು ಒದಗಿಸುವ ಸಂಬಂಧ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸುತ್ತೋಲೆ ಸಂಖ್ಯೆ : ಕಂಇ ಟಿಎನ್‌ಆರ್ 2023, ದಿನಾಂಕ: 04-12-2023 ರಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ತಿಳಿಸಲಾಗಿದೆ.

ಕರ್ನಾಟಕ ರಾಜ್ಯವು ಆಗಿಂದಾಗೆ, ಬರ ಪರಿಸ್ಥಿತಿಯನ್ನು ಎದುರಿಸುತ್ತಿರುವುದರಿಂದ ಜಾನುವಾರುಗಳಿಗೆ ವಿಶೇಷವಾಗಿ ಬೇಸಿಗೆ ಕಾಲದಲ್ಲಿ ಮೇವು ಕೊರತೆ ಉಂಟಾಗುತ್ತಿದ್ದು, ಸದರಿ ಕೊರತೆಯನ್ನು ನೀಗಿಸಲು ಸುಸ್ಥಿರ ಮೇವು ಉತ್ಪಾದನೆ ಹೆಚ್ಚಿಸಲು ಮೇವು ಬೆಳೆ ಪ್ರದೇಶವನ್ನು ವಿಸ್ತರಿಸುವ ಅನಿವಾರ್ಯತೆ ಇದೆ. ಈ ಉದ್ದೇಶದಿಂದ ಆಯಾ ಜಿಲ್ಲೆಗಳಲ್ಲಿ ಲಭ್ಯವಿರುವ ಶಾಶ್ವತ ಹುಲ್ಲುಗಾವಲುಗಳು, ಅರಣ್ಯ ಪ್ರದೇಶ, ಗೋಮಾಳ ಮತ್ತು ಇತರೆ ಪ್ರದೇಶಗಳನ್ನು ಮೇವು ಉತ್ಪಾದನೆಗೆ ಬಳಸಿಕೊಂಡು ಜಿಲ್ಲಾ ಜಾನುವಾರುಗಳ ಮೇವು ಬೇಡಿಕೆಗೆ ಅನುಗುಣವಾಗಿ ಮೇವು ಉತ್ಪಾದನೆ ಮಾಡಲು ಅಲ್ಪಾವಧಿ ಮತ್ತು ದೀರ್ಘಾವಧಿ ಯೋಜನೆಗಳನ್ನು ರೂಪಿಸಿಕೊಂಡು ಕ್ರಮವಹಿಸುವಂತೆ ಸೂಚಿಸಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮೇವು ಅಭಿವೃದ್ಧಿ ಸಮಿತಿ ರಚಿಸಲಾಗಿದೆ.

ಮುಂಬರುವ ಬೇಸಿಗೆ ದಿನಗಳಲ್ಲಿ ಮೇವಿನ ಕೊರತೆ ನೀಗಿಸಲು ಪ್ರಸ್ತಾಪಿತ ಜಿಲ್ಲೆಗಳಲ್ಲಿ ಈಗಾಗಲೇ ಮೇವಿನ ಬೀಜದ ಕಿರುಪೊಟ್ಟಣಗಳನ್ನು ವಿತರಿಸಿ ಹಸಿರು ಮೇವು ಉತ್ಪಾದನೆಗೆ ಕ್ರಮವಹಿಸಲಾಗಿದೆ.

ಧನಗರ ಗೌಳಿ ಜನಾಂಗವು ವಾಸಿಸುವ ಪ್ರದೇಶಗಳು ಸೇರಿದಂತೆ ರಾಜ್ಯದ ಎಲ್ಲಾ ಪ್ರದೇಶಗಳಲ್ಲಿ ರೈತರ ಮನೆ ಬಾಗಿಲಿಗೆ ಈ ಕೆಳಕಂಡ ಪಶುವೈದ್ಯಕೀಯ ಸೇವೆಗಳನ್ನು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಒದಗಿಸಲು ಕ್ರಮವಹಿಸಲಾಗುತ್ತಿದೆ.

**ಜಾನುವಾರು ಆರೋಗ್ಯ ಸಂರಕ್ಷಣೆ ಕ್ರಮಗಳು:**

ಜಾನುವಾರುಗಳಿಗೆ ಬಾಧಿಸುವ ಸಾಂಕ್ರಾಮಿಕ ರೋಗಗಳಾದ ಕಾಲು-ಬಾಯಿ ಜ್ವರ, ಕಂದು ರೋಗ, ನೆರಡಿ ರೋಗ, ಗಂಟಲು ಬೇನೆ, ಚಪ್ಪೆರೋಗ, ಚರ್ಮಗಂಟು ರೋಗ, ಕುರಿಮೇಕೆಗಳಲ್ಲಿ ಕಾಣಿಸಿಕೊಳ್ಳುವ ಪಿಪಿಆರ್. ಕರುಳು ಬೇನೆ ಇತ್ಯಾದಿ ಕಾಯಿಲೆಗಳನ್ನು ನಿಯಂತ್ರಿಸುವುದು ಅತಿ ಮುಖ್ಯವಾಗಿರುತ್ತದೆ. ಅದಕ್ಕಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ National Animal Disease Control Programme (NADCP), Assistance to States for Control of Animal Diseases (ASCAD) ಮುಂತಾದ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಕಾಲಕಾಲಕ್ಕೆ ರೋಗಗಳ ವಿರುದ್ಧ ಲಸಿಕೆ ಹಾಕಲಾಗುತ್ತಿದೆ.

**ಬರದ ಹಿನ್ನೆಲೆಯಲ್ಲಿ ಜಾನುವಾರುಗಳನ್ನು ವಿಮೆಗೆ ಒಳಪಡಿಸುವುದು:**

ಜಾನುವಾರುಗಳ ಆಕಸ್ಮಿಕ ಮರಣದಿಂದ ರಾಜ್ಯದ ರೈತರಿಗಾಗುವ ಆರ್ಥಿಕ ನಷ್ಟದಿಂದ ಪಾರು ಮಾಡುವ ಉದ್ದೇಶದಿಂದ ಎಲ್ಲಾ ಜಾನವಾರುಗಳನ್ನು ವಿಮೆಗೆ ಒಳಪಡಿಸಲಾಗುತ್ತಿದೆ. ವಿಮೆಯ ಕಂತಿನ ಶೇ.70 ರಷ್ಟು ವಿಮಾಕಂತು ಸರ್ಕಾರ ಭರಿಸುತ್ತಿದ್ದು, ಉಳಿದ ಶೇ.30 ರಷ್ಟು ರಾಸುಗಳ ಮಾಲೀಕರು ವಂತಿಗೆ ರೂಪದಲ್ಲಿ ವಿಮಾ ಕಂಪನಿಗೆ ಪಾವತಿಸಬೇಕಾಗಿರುತ್ತದೆ.

**ಆಕಸ್ಮಿಕ ಜಾನುವಾರು ಮರಣಕ್ಕೆ ಪರಿಹಾರ - ಅನುಗ್ರಹ ಯೋಜನೆ:**

ಜಾನುವಾರುಗಳ ರಕ್ಷಣೆಗಾಗಿ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಂಡರೂ ಕೆಲವೊಮ್ಮೆ ಆಕಸ್ಮಿಕ ಸಾವು ಸಂಭವಿಸುವ ಸಾಧ್ಯತೆ ಇರುತ್ತದೆ. ಇದರಿಂದ ರೈತರಿಗೆ ಆಗುವ ಆರ್ಥಿಕ ನಷ್ಟವನ್ನು ಮನಗೊಂಡು ಸರ್ಕಾರವು ಅನುಗ್ರಹ ಯೋಜನೆಯಡಿಯಲ್ಲಿ ಆಕಸ್ಮಿಕವಾಗಿ ಸಾವನ್ನಪ್ಪಿದ ಪ್ರತಿ ರಾಸುವಿಗೆ ರೂ.10,000/- ಪರಿಹಾರ ಘೋಷಣೆ ಮಾಡಿ ಪರಿಹಾರ ವಿತರಿಸಲಾಗುತ್ತಿದೆ. ಅದರಂತೆ, ಸದರಿ ಈ ಸಾಲಿನಲ್ಲಿ ಈಗಾಗಲೇ ರೂ.10.00 ಕೋಟಿ ಪರಿಹಾರ ಅನುದಾನವು ಬಿಡುಗಡೆಯಾಗಿದೆ.

...3

ಕುರಿ ಮತ್ತು ಮೇಕೆಗಳಿಗೆ - ಅನುಗ್ರಹ ಕೊಡುಗೆ ಯೋಜನೆಯನ್ನು ಮುಂದುವರೆಸುತ್ತಿದ್ದು ಆಕಸ್ಮಿಕವಾಗಿ ಮರಣ ಹೊಂದಿದ ಪ್ರತಿ ಕುರಿ ಮತ್ತು ಮೇಕೆಗಳಿಗೆ ರೂ.5,000/- ಗಳನ್ನು ಪರಿಹಾರವಾಗಿ ನೀಡಲಾಗುತ್ತಿದೆ.

ಈ ರೀತಿ ಜಾನುವಾರುಗಳನ್ನು ಸಂರಕ್ಷಿಸಿ ಹೈನುಗಾರಿಕೆ ವೃತ್ತಿಯನ್ನು ಪ್ರೋತ್ಸಾಹಿಸಲು ಹಾಗೂ ಬೇಸಿಗೆ ಸಮಯದಲ್ಲಿ ಮೇವು ಸಿಗುವಂತೆ ಯೋಜನೆ ರೂಪಿಸಿ ಜೀವನ ನಿರ್ವಹಿಸಲು ಅನುಕೂಲ ಮಾಡಿಕೊಡಲು ಸರ್ಕಾರವು ಕ್ರಮ ವಹಿಸಿರುತ್ತದೆ.

**ಇ-ಪಸಂಮೀ 31 ಸಲೆವಿ 2024**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**